# ಸಂಸ್ಕೃತ ಸಂಶೋಧನ ಸಂಸತ್

## ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

**ಮೇಲುಕೋಟೆ – 571 431, ಮಂಡ್ಯ ಜಿಲ್ಲೆ, ಕರ್ನಾಟಕ**

Phone : (08236) 295611, 295612, E-mail : asroffice1976@gmail.com, Website : http://www.melkotesanskritacademy.org


**ವಿಷಯ:** ಗ್ರಂಥಾಲಯ ತಪಾಸಣಾ ವರದಿಯ ಶಿಫಾರಸ್ಸನ್ನು ಜಾರಿಗೊಳಿಸುವ ಬಗೆಗೆ.

**ಉಲ್ಲೇಖ:**
1. No. PAG(G&SSA)/OAD Special Cell/A/2019-20/68, 10.03.2020
2. ಸುತ್ತೋಲೆ ಸಂ: ಸಂಸಂಸಂ/45/ಆಡಳಿತ/2019–20, ದಿನಾಂಕ: 02.12.2019
3. 2020–21ನೇ ಸಾಲಿನ ಗ್ರಂಥಾಲಯ ತಪಾಸಣಾ ವರದಿ
4. 16ನೆಯ ಗ್ರಂಥಾಲಯ ಸಮಿತಿ ಸಭೆಯ ವಿಷಯ (10)ರಂತೆ.
5. ಶ್ರೀ ಎಂ.ಎ. ಲಕ್ಷ್ಮೀತಾತಾಚಾರ್‌ರವರ ಮರಣ ಪ್ರಮಾಣ ಪತ್ರದ ದಿನಾಂಕ: 07.06.2021
6. ದಿನಾಂಕ: 9.11.2021ರ ಆಡಳಿತ ಸಮಿತಿ ಸಭೆಯ ವಿಷಯ (3)ರಂತೆ
7. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಆದೇಶ (6), ದಿನಾಂಕ: 01.12.2021.

* * *

**ಪ್ರಸ್ತಾವನೆ:**

ಉಲ್ಲೇಖ (1)ರಲ್ಲಿ ಮಹಾಲೇಖಪಾಲಕರ ವರದಿ ವಿಷಯ (9)ರಲ್ಲಿ ಗ್ರಂಥಾಲಯ ತಪಾಸಣಾ ವರದಿಯನ್ನು ಕೋರಿದ್ದಂತೆ ಸಲ್ಲಿಕೆಯಾಗದ ಕಾರಣ ಆಕ್ಷೇಪಣೆಯಲ್ಲಿಡಲಾಗಿದೆ. ಉಲ್ಲೇಖ (2)ರಲ್ಲಿ ನಿಯಮಾನುಸಾರ (3) ವರ್ಷಕ್ಕೊಮ್ಮೆ ಭೌತಿಕ ತಪಾಸಣಾ ಕಾರ್ಯ ಕೈಗೊಳ್ಳಬೇಕಿರುವುದರಿಂದ ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಉಲ್ಲೇಖ (3)ರಲ್ಲಿ 2020–21ನೇ ಸಾಲಿನ ಗ್ರಂಥಾಲಯ ತಪಾಸಣಾ ವರದಿಯು ಸಲ್ಲಿಕೆಯಾಗಿದ್ದು, ಸದರಿ ಸಮಿತಿಯು 4 ಅಂಶಗಳ ಶಿಫಾರಸ್ಸು ಮಾಡಿದೆ. ಈ ಅಂಶವನ್ನು ಉಲ್ಲೇಖ (4)ರ ಗ್ರಂಥಾಲಯ ಸಮಿತಿಗೆ ಮಂಡಿಸಲಾಗಿದ್ದು, ಸಮಿತಿಯು ಶಿಫಾರಸ್ಸು ಮಾಡಲಾದ ವರದಿಯನ್ನು ಒಪ್ಪಿರುತ್ತದೆ. ಉಲ್ಲೇಖ (5)ರಲ್ಲಿ ಶ್ರೀ ಎಂ.ಎ. ಲಕ್ಷ್ಮೀತಾತಾಚಾರ್‌ರವರು ಕೋವಿಡ್ – 19 ಸೋಂಕಿಗೆ ಮರಣ ಹೊಂದಿರುತ್ತಾರೆ. ಉಲ್ಲೇಖ (6)ರಲ್ಲಿ ಸಂಸ್ಥೆಯ ಆಡಳಿತ ಸಮಿತಿ ಸಭೆಯ ಮುಂದೆ ಗ್ರಂಥಾಲಯ ಸಮಿತಿ ನಿರ್ಣಯವನ್ನು ಮಂಡಿಸಲಾಗಿದ್ದು ತೆಗೆದುಕೊಂಡ ನಿರ್ಣಯವನ್ನು ಸ್ಥಿರೀಕರಣಗೊಳಿಸಿದೆ. ಈ ಅಂಶವನ್ನು ಮಾನ್ಯ ಕುಲಪತಿಗಳಿಗೆ ಸಮಿತಿಯ ಶಿಫಾರಸ್ಸಿನಂತೆ ಜಾರಿಗೊಳಿಸಲು ಸಲ್ಲಿಸಲಾಗಿದ್ದಂತೆ ಒಪ್ಪಿಗೆ ಸೂಚಿಸಿದ್ದಾರೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ.

ದಿನಾಂಕ: 25.11.2021

ಸಂಸಂಸಂ/12/ಗ್ರಂಥಾಲಯ/2020–21

## ಕಛೇರಿ ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಗ್ರಂಥಾಲಯ ತಪಾಸಣಾ ವರದಿಯನ್ವಯ ಈ ಕೆಳಕಂಡ ಶಿಫಾರಸ್ಸನ್ನು ತಕ್ಷಣ ಜಾರಿಗೆ ಬರುವಂತೆ ಆದೇಶಿಸಿದೆ.

1. ಸಂಸ್ಥೆಯ ಪ್ರಾರಂಭದಿಂದ 1977–78ರಿಂದ 2012–13ರವರೆಗಿನ 35 ವರ್ಷಗಳಿಂದ ತೆಗೆದುಹಾಕಲಾಗಿರುವ ಸಂಖ್ಯೆ : 657 ಪುಸ್ತಕಗಳ ಪಟ್ಟಿಯನ್ನು ತಯಾರಿಸಿ ಅದರ ಬೆಲೆಯನ್ನು ಪಟ್ಟಿ ಮಾಡಿ ಲೆಕ್ಕಶಾಖೆಗೆ ನೀಡುವಂತೆ ಆದೇಶಿಸಿದೆ. ಇದನ್ನು ಸಂಸ್ಥೆಯ ವಾರ್ಷಿಕ ಲೆಕ್ಕದ ಆಸ್ತಿಯಲ್ಲಿ ಕಡಿತಗೊಳಿಸಿದೆ.

2. ಶ್ರೀ ಎಂ.ಎ. ಲಕ್ಷ್ಮೀತಾತಾಚಾರ್ ಇವರು ಮರಣ ಹೊಂದಿರುವುದರಿಂದ ಅವರ ಕಾಲದ 363 ಪುಸ್ತಕಗಳನ್ನು ಪಟ್ಟಿ ಮಾಡಿ ಪರಿಗ್ರಹಣ ಪುಸ್ತಕದಿಂದ ತೆಗೆದುಹಾಕುವುದು. ಹಾಗೆಯೇ ಈ ಪುಸ್ತಕಗಳ ಬೆಲೆಯನ್ನು ಕ್ರೋಢೀಕರಿಸಿ ವಾರ್ಷಿಕ ಲೆಕ್ಕದಲ್ಲಿ ಗ್ರಂಥಾಲಯ ಆಸ್ತಿಯಲ್ಲಿ ಈ ಮೊತ್ತವನ್ನು ಕಡಿತಗೊಳಿಸುವುದು.

3. ಹೊರ ವಿದ್ವಾಂಸರು/ಓದುಗರು ಎರವಲು ಪಡೆದಿರುವ 10 ಪುಸ್ತಕಗಳನ್ನು ಪರಿಗ್ರಹಣ ಸಂಖ್ಯೆಯಿಂದ

Scanned with OKEN Scanner

ಕಡಿತಗೊಳಿಸುವುದು. ಹಾಗೆಯೇ ಇದರಿಂದ ಉಂಟಾಗುವ ನಷ್ಟವನ್ನು ಎರವಲು ಪಡೆಯುವ ಮುನ್ನ ಠೇವಣಿಯಾಗಿ ಇಟ್ಟಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಲೆಕ್ಕವನ್ನು ಸರಿದೂಗಿಸುವುದು.

4. 2013-14ನೇ ಸಾಲಿನಿಂದ ಇಲ್ಲಿಯವರೆಗೆ 30 ಪುಸ್ತಕಗಳು ಲಭ್ಯವಿರುವುದಿಲ್ಲ. ಗ್ರಂಥಾಲಯ ನಿಯಮದ ಪ್ರಕಾರ ಈ ಪುಸ್ತಕಗಳನ್ನು ಪರಿಗ್ರಹಣ ಸಂಖ್ಯೆಯಿಂದ ತೆಗೆದುಹಾಕುವುದು.

ಮೇಲ್ಕಂಡ ಕ್ರ.ಸಂ. (1) ರಿಂದ (4)ರವರೆಗಿನ ಶಿಫಾರಸ್ಸನ್ನು ಜಾರಿಗೊಳಿಸಿ ಲೆಕ್ಕಶಾಖೆಗೆ ವಿವರವನ್ನು ಒದಗಿಸಲು ಹಿರಿಯ ಗ್ರಂಥಪಾಲರಿಗೆ ಸೂಚಿಸಿದೆ. ಸದರಿ ವಿವರಗಳನ್ನು ಬರುವ 2021-22ರ ಆರ್ಥಿಕ ವರ್ಷದ ಲೆಕ್ಕದಲ್ಲಿ ಕಾಣಿಸಲು ತಿಳಿಸಿದೆ.

25/11/2021

ಕುಲಸಚಿವರು (ಆಡಳಿತ)

**ಇವರಿಗೆ,**

1. **ಶ್ರೀ ಎಂ.ಎಸ್. ಚಂದ್ರಶೇಖರ್, ಹಿರಿಯ ಗ್ರಂಥಪಾಲಕರು (ಪ್ರ)** – ಆದೇಶದಂತೆ ತಕ್ಷಣ ಕ್ರಮವಹಿಸಿ ಲೆಕ್ಕಶಾಖೆಗೆ ವಿವರ ನೀಡುವುದು.
2. **ಶ್ರೀ ಪಿ. ಜಯತೀರ್ಥ, ಹಿರಿಯ ಲೆಕ್ಕಿಗರು ಹಾಗೂ ಸ.ಕು.ಸ (ಆ-ಪ್ರ)** – ಆರ್ಥಿಕ ವರ್ಷ 2021-22ರಲ್ಲಿ ಆಡಿಟರ್ ಇವರ ಬಳಿ ಚರ್ಚಿಸಿ ಸದರಿ ಅಂಶ ಮತ್ತು ಲೆಕ್ಕವನ್ನು ಸರಿದೂಗಿಸುವುದು.

**ಪ್ರತಿಗಳು:**

1. ಕಛೇರಿ ಪ್ರತಿ

Scanned with OKEN Scanner